ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆಎಂಎಫ್‌ಸಿ ಮುದ್ದೇಬಿಹಾಳ ಇವರ ನ್ಯಾಯಾಲಯ –

ಸಿ.ಸಿ.ನಂ.651/17,

ಪಿಡಬ್ಲ್ಯೂ –3, ಸಿಡಬ್ಲ್ಯೂ-4,

ಸಾಕ್ಷಿದಾರನ ಹೆಸರು : ದೇವೇಂದ್ರಾ ಚೋಕಾವಿ

ತಂದೆಯ ಹೆಸರು : ಬಿಯಪ್ಪ

ವಯಸ್ಸು : 60 ವರ್ಷ

ಉದ್ಯೋಗ : ಕೂಲಿ ಕೆಲಸ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

ವಾಸಸ್ಥಳ : ಗುಂಡಕನಾಳ ದಿನಾಂಕಃ 15-07-2019

<u>ಮುಖ್ಯ ವಿಚಾರಣೆ ಎಪಿಪಿಯವರಿಂದ –</u>

ಚಾಸಾ: 5 ಮತ್ತು 7 ರವರ ಪರಚಿಯ ಇರುತ್ತದೆ. ಚಾಸಾ: 1 ರವರ ಪರಿಚಯ ಇರುವುದಿಲ್ಲ. ಮೃತ ಬೀಮಪ್ಪನ ಪರಿಚಯ ಇರುವುದಿಲ್ಲ. ಪೊಲೀಸರ ಹೇಳಿಕೆಯ ಮೇರೆಗೆ ಪಂಚನಾಮೆಗೆ ಸಹಿ ಮಾಡಿರುತ್ತೇನೆ, ಆದರೆ ಪಂಚನಾಮೆಯಲ್ಲಿ ಬರೆಸ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ಗುನ್ಹೆ ಸ್ಥಳದ ಪಂಚನಾಮೆಯನ್ನು ನಿಪಿ: 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ: 5(ಎ) ಎಂದು, ಹಾತ್ ನಕಾಶೆಯನ್ನು ನಿಪಿ: 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ: 6(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಒಂದು ಪೋಟು ತೆಗೆದಿದ್ದು ಸದರಿ ಪೋಟುದಲ್ಲಿ ನಾನು ಮತ್ತು ಚಾಸಾ: 5 ಇರುತ್ತೇವೆ. ಸದರಿ ಪೋಟುವನ್ನು ನಿಪಿ: 7 ಎಂದು ಗುರುತಿಸಲಾಯಿತು. ವಾಹನ ಜಪ್ತಿ ಪಂಚನಾಮೆಯನ್ನು ನಿಪಿ: 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ: 8(ಎ) ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀಸವಾಲು: ಎ.ಪಿ.ಪಿ ರವರಿಂದ**

ದಿನಾಂಕ 17-07-2017 ರಂದು ಬೆಳಿಗ್ಗೆ 10 ಗಂಟೆಯಿಂದ 11 ಗಂಟೆಯ ಅವಧಿಯಲ್ಲಿ ಪೊಲೀಸರು ಗುನ್ಹಾ ಸ್ಥಳಕ್ಕೆ ಬಂದಿದ್ದು ಚಾಸಾ: 7 ರವರು ಗುನ್ಹೆ ಸ್ಥಳ ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ: 5 ರವರ ಸಮಕ್ಷಮ ಪಂಚನಾಮೆ ಮಾಡಿ ನಮಗೆ ಪಂಚನಾಮೆಯನ್ನು ಓದಿ ಹೇಳಿ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 17-07-2017 ರಂದು ಮದ್ಯಾಹ್ನ 12 ರಿಂದ 1 ಗಂಟೆಯ ಅವಧಿಯಲ್ಲಿ ನನ್ನ ಮತ್ತು ಚಾಸಾ: 5 ರವರ ಸಮಕ್ಷಮ ವಾಹನಗಳನ್ನು ಜಪ್ತಿಪಡಿಸಿಕೊಂಡು ಜಪ್ತಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಜಪ್ತಿ ಪಂಚನಾಮೆ ಕಾಲಕ್ಕೆ ನಿಪಿ: 3 ಪೋಟು ತೆಗೆಯಲಾಗಿದೆ ಎಂದರೆ ಸರಿಯಲ್ಲ. ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ನನ್ನ ಸಮಕ್ಷಮ ಗುನ್ಹೆ ಸ್ಥಳದಲ್ಲಿ ಮತ್ತು ವಾಹನ ಜಪ್ತಿ ಪಂಚನಾಮೆಗಳನ್ನು ಮಾಡಿದ್ದರೂ ಪಂಚನಾಮೆ ಮಾಡಿರುವುದಿಲ್ಲ ಎಂದು ಸಹಿ ಪಡೆದಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಗೈರು ಹಾಜರಿದ್ದು ಅವರ ಪರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಓ ಹೆ ಕೆ ಸರಿ ಅದೆ

ಪ್ರ.ನ್ಯಾ.ದಂ. ಮುದ್ದೇಬಿಹಾಳ.